ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-1

ಸಂಖ್ಯೆ:ಇ-ಆಡಳಿತ.ಜನಸ್ಪಂದನ.ಇತರೆ.1/2012-13. ದಿನಾಂಕ:01-10-2012

**ಸು ತ್ತೋ ಲೆ**

ವಿಷಯ:- ಇ-ಆಡಳಿತ ಜನಸ್ಪಂದನ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಸಲುವಾಗಿ ಜಿಲ್ಲಾ/ತಾಲ್ಲೂಕು ಹಂತದ ಇ-ಆಡಳಿತ ತಂಡವನ್ನು ರಚಿಸುವ ಬಗ್ಗೆ.

ಉಲ್ಲೇಖ:- ದಿನಾಂಕ:28-09-2012ರ ಸಕಾಲ ನೋಡಲ್ ಅಧಿಕಾರಿಗಳ ಸಭೆಯಲ್ಲಿ ನಿರ್ಣಯಿಸಿದಂತೆ.

ಈ ಮೇಲಿನ ವಿಷಯಕ್ಕೆ ಸಂಭಂಧಿಸಿದಂತೆ ಉಲ್ಲೇಖಿತ ಸಭೆಯಲ್ಲಿ ಚರ್ಚಿಸಿದಂತೆ ಇಲಾಖೆಯ ವಿವಿಧ ತಂತ್ರಾಂಶಗಳ ಅನುಷ್ಟಾನ, ವರದಿ ತಯಾರಿಕೆ, ಹಾರ್ಡ್‌ವೇರ್, ತಂತ್ರಾಂಶಗಳನ್ನು ಜಿಲ್ಲಾ/ತಾಲ್ಲೂಕು ಹಂತಗಳಲ್ಲಿ ಪೂರ್ವಭಾವಿ ಅನುಷ್ಠಾನ, ಶಿಕ್ಷಣ ವಾಹಿನಿ ತಂತ್ರಾಂಶಗಳನ್ನು ಒಳಗೊಂಡಂತೆ ಜನಸ್ಪಂದನ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಅಳವಡಿಕೆ ಇತ್ಯಾದಿ ಕಾರ್ಯಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸುವ ಸಲುವಾಗಿ ಜಿಲ್ಲಾ ಹಾಗೂ ತಾಲ್ಲೂಕು ಹಂತಗಳಲ್ಲಿ ಇ-ಆಡಳಿತ ತಂಡಗಳನ್ನು ರಚಿಸಿಲು ತೀರ್ಮಾನಿಸಲಾಗಿದ್ದು, ಅದರಂತೆ ಈ ಕೆಳಕಂಡಂತೆ ಕ್ರಮ ವಹಿಸಲು ಸೂಚಿಸಿದೆ.

1) ಸಕಾಲ ತಂತ್ರಾಂಶದೊಂದಿಗೆ ಹಾಲಿ ಇರುವ ಹೆಚ್.ಆರ್.ಎಂ.ಎಸ್., ಆರ್.ಟಿ.ಐ., ಶಿಕ್ಷಣ ವಾಹಿನಿ, ಸಾರ್ವಜನಿಕ ಕುಂದುಕೊರತೆ ತಂತ್ರಾಂಶಗಳನ್ನೊಳಗೊಂಡ ಇ-ಜನಸ್ಪಂದನ ತಂತ್ರಾಂಶವು ಜಾರಿಯಾಗಲಿದ್ದು, ಒಂದೇ ತಂತ್ರಾಂಶದಲ್ಲಿ ಅರ್ಜಿದಾರರು ವಿವಿಧ ಸೇವೆಗಳನ್ನು ಪಡೆಯಬಹುದಾಗಿದೆ. ಈ ನಿಟ್ಟಿನಲ್ಲಿ ನೂತನವಾಗಿ ಜಾರಿಯಾಗಲಿರುವ ಇ-ಜನಸ್ಪಂದನ ತಂತ್ರಾಂಶವನ್ನು ಪರಿಣಾಮಕಾರಿಯಾಗಿ ಅನುಷ್ಟಾನಗೊಳಿಸುವ ನಿಟ್ಟಿನಲ್ಲಿ ಹಾಲಿ ಸಕಾಲ ನೋಡಲ್ ಅಧಿಕಾರಿಗಳು ಹೆಚ್ಚುವರಿ ಜವಾಬ್ದಾರಿಯನ್ನು ನಿರ್ವಹಿಸಬೇಕಾಗಿದೆ. ಈ ನಿಟ್ಟಿನಲ್ಲಿ ಜಿಲ್ಲಾ ಉಪನಿರ್ದೇಶಕರು, ಸಕಾಲ ನೋಡಲ್ ಅಧಿಕಾರಿಗಳು ಮತ್ತು ಜಿಲ್ಲಾ ಪತ್ರಾಂಕಿತ ಸಹಾಯಕರು ಸಮನ್ವಯದೊಂದಿಗೆ ಕಾರ್ಯ ನಿರ್ವಹಿಸುವುದು.

2) ಸಕಾಲ ನೋಡಲ್ ಅಧಿಕಾರಿಗಳು ಸೇರಿದಂತೆ ಡಯಟ್ ಇ.ಟಿ.ಸೆಲ್ ನಲ್ಲಿನ ಹಿರಿಯ ಉಪನ್ಯಾಸಕರು, ಉಪನಿರ್ದೇಶಕರ ಕಛೇರಿಯಲ್ಲಿನ ಕಂಪ್ಯೂಟರ್ ಜ್ಞಾನವುಳ್ಳ ಒಬ್ಬರು ವಿಷಯ ನಿರ್ವಾಹಕರು ಮತ್ತು ಜಿಲ್ಲಾ ಕಂಪ್ಯೂಟರ್ ಪ್ರೋಗ್ರಾಮರ್ ಒಳಗೊಂಡಂತೆ ಜಿಲ್ಲಾ ಇ-ಆಡಳಿತ ಕೋರ್ ತಂಡವನ್ನು ಸೃಜಿಸಿ ಇ-ಜನಸ್ಪಂದ ತಂತ್ರಾಂಶಗಳನ್ನು ಒಳಗೊಂಡಂತೆ ಇಲಾಖೆಯ ವಿವಿಧ ಇ-ಆಡಳಿತ ಕಾರ್ಯಕ್ರಮಗಳಿಗೆ ಸಂಬಂಧಿಸಿದ ತಂತ್ರಾಂಶಗಳ ಜಿಲ್ಲಾ ಹಂತದ ಉಸ್ತುವಾರಿ, ಅನುಷ್ಟಾನ, ವರದಿ ನಿರ್ವಹಣೆ ಇತ್ಯಾದಿ ಕಾರ್ಯಗಳನ್ನು ನಿರ್ವಹಿಸುವುದು. ಈ ಬಗ್ಗೆ ಸಂಬಂಧಿಸಿದ ಜಿಲ್ಲಾ ಉಪನಿದೇಶಕರು ಆದೇಶವನ್ನು ಹೊರಡಿಸಿ ಸಂಬಂಧಿಸಿದ ಅಧಿಕಾರಿಗಳ ವಿವರ, ದೂರವಾಣಿ ಸಂಖ್ಯೆ, ಇ-ಮೇಲ್ ವಿಳಾಸವನ್ನು ರಾಜ್ಯ ಇ-ಆಡಳಿತ ನೋಡಲ್ ಅಧಿಕಾರಿಗಳಿಗೆ ಹಾರ್ಡ್ ಕಾಪಿ ಮತ್ತು ಸಾಫ್ಟ್ ಪ್ರತಿಯನ್ನು ಈ ಮುಂದಿನ ಇ-ಮೇಲ್ ವಿಳಾಸಕ್ಕೆ ಕಳುಹಿಸುವುದು. (sadpiegov@gmail.com / miscpi.edu.karbng@kar.nic.in)

3) ಮೇಲಿನಂತೆ ಬ್ಲಾಕ್ ಹಂತದಲ್ಲಿಯೂ ಸಹಾ ಬಿ.ಇ.ಓ. ಕಛೇರಿಯ ಪತ್ರಾಂಕಿತ ವ್ಯವಸ್ಥಾಪಕರು, ಶಿಕ್ಷಣ ಸಂಯೋಜಕರು, ಎಸ್.ಎಸ್.ಎ ಅಡಿಯಲ್ಲಿರುವ ಬಿ.ಆರ್.ಸಿ. ಪ್ರೋಗ್ರಾಮರ್, ಕಂಪ್ಯೂಟರ್ ನುರಿತ ಹೆಚ್.ಆರ್.ಎಂ.ಎಸ್. ಜ್ಞಾನವುಳ್ಳ ನಿರ್ವಾಹಕರನ್ನು ಒಳಗೊಂಡಂತೆ ಬ್ಲಾಕ್ ಹಂತದ ಇ-ಆಡಳಿತ ಕೋರ್ ತಂಡವನ್ನು ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳು ಸೃಜಿಸಿ ಸಂಬಂಧಿಸಿದ ಅಧಿಕಾರಿ/ಸಿಬ್ಬಂದಿ ವರ್ಗದವರ ವಿವರ, ದೂರವಾಣಿ ಸಂಖ್ಯೆ, ಇ-ಮೇಲ್ ವಿಳಾಸವನ್ನು ಇ-ಸ್ಪಂದನ ನೋಡಲ್ ಆಧಿಕಾರಿಗಳು ತಾಲ್ಲೂಕುವಾರು

ಕ್ರೋಢೀಕರಿಸಿ ರಾಜ್ಯ ಇ–ಆಡಳಿತ ನೋಡಲ್ ಅಧಿಕಾರಿಗಳಿಗೆ ಹಾರ್ಡ್ ಕಾಪಿಯನ್ನು ಅಂಚೆಯ ಮೂಲಕ ಅಪರ ಆಯುಕ್ತರು(ಆಡಳಿತ), ಆಯುಕ್ತರ ಕಛೇರಿ, ಬೆಂಗಳೂರು ರವರಿಗೆ ಮತ್ತು ಸಾಫ್ಟ್ ಪ್ರತಿಯನ್ನು ಮಾಹಿತಿಯನ್ನು ಜಿಲ್ಲಾ ಉಪನಿರ್ದೇಶಕರ/ಇ–ಆಡಳಿತ(ಸಕಾಲ/ಇ–ಸ್ಪಂದನ) ನೋಡಲ್ ಅಧಿಕಾರಿಗಳ ಮೂಲಕ ಜಿಲ್ಲಾ ಹಂತದಲ್ಲಿ ಕ್ರೋಢೀಕರಿಸಿ ಈ ಮುಂದಿನ .ಇ–ಮೇಲ್ ವಿಳಾಸಕ್ಕೆ ಕಳುಹಿಸುವುದು(sadpiegov@gmail.com & miscpi.edu.karbng@kar.nic.in). (ಅನುಬಂಧ -1ರ [illegible])

| ಕ್ರ ಸಂ | ಜಿಲ್ಲಾ ಹಂತದಲ್ಲಿ ಇ–ಆಡಳಿತ ತಂಡ | ತಾಲ್ಲೂಕು ಹಂತದ ಇ–ಆಡಳಿತ ತಂಡ | ಇ–ಆಡಳಿತ ತಂಡ ಪದನಾಮ |
|---|---|---|---|
| 1. | ಜಿಲ್ಲಾ ಉಪನಿರ್ದೇಶಕರ ಕಛೇರಿಯ ಶಿಕ್ಷಣಾಧಿಕಾರಿಗಳು ಹಾಗೂ ಸಕಾಲ ನೋಡಲ್ ಅಧಿಕಾರಿಗಳು | ಬಿ.ಇ.ಓ. ಕಛೇರಿ ಪತ್ರಾಂಕಿತ ವ್ಯವಸ್ಥಾಪಕರು | ನೋಡಲ್ ಅಧಿಕಾರಿಗಳು |
| 2. | ಡಯಟ್ ಇ.ಟಿ.ಸೆಲ್ ನಲ್ಲಿನ ಹಿರಿಯ ಉಪನ್ಯಾಸಕರು | ಶಿಕ್ಷಣ ಸಂಯೋಜಕರು | ತಂಡದ ಸದಸ್ಯರು |
| 3. | ಕಂಪ್ಯೂಟರ್ ಜ್ಞಾನವುಳ್ಳ ಒಬ್ಬರು ವಿಷಯ ನಿರ್ವಾಹಕರು | ಹೆಚ್.ಆರ್.ಎಂ.ಎಸ್. ಜ್ಞಾನವುಳ್ಳ ವಿಷಯ ನಿರ್ವಾಹಕರು | ತಂಡದ ಸದಸ್ಯರು |
| 4. | ಜಿಲ್ಲಾ ಕಂಪ್ಯೂಟರ್ ಪ್ರೋಗ್ರಾಮರ್ | ಎಸ್.ಎಸ್.ಎ ಅಡಿಯಲ್ಲಿರುವ ಬಿ.ಆರ್.ಸಿ. ಪ್ರೋಗ್ರಾಮರ್ | ತಂಡದ ಸದಸ್ಯರು |

4) ಜಿಲ್ಲಾ ಹಂತದಲ್ಲಿ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಐ.ಟಿ. ಕನ್ಸಲ್ಟೆಂಟ್‌ರವರ ಸಹಕಾರವನ್ನು ಪಡೆದು ತಂತ್ರಾಂಶಗಳ ಅನುಷ್ಠಾನ, ವರದಿಗಳನ್ನು ಸೃಜಿಸುವುದು, ಸಾರ್ವಜನಿಕರಿಗೆ ಮಾಹಿತಿ ನೀಡುವುದು ಇತ್ಯಾದಿ ಕಾರ್ಯಗಳನ್ನು ಜಿಲ್ಲಾ ಇ–ಆಡಳಿತ ತಂಡ ನಿರ್ವಹಿಸುವುದು.

5) ಪ್ರತೀ ತಾಲ್ಲೂಕಿನಲ್ಲಿಯೂ ಸಹಾ ಕೆಸ್ವಾನ್ ಮಾಹಿತಿ ಕೇಂದ್ರವನ್ನು ತೆರೆದಿದ್ದು, ಸದರಿ ಕೇಂದ್ರದಲ್ಲಿ ಇಂಟರ್‌ನೆಟ್, ಇ–ಮೇಲ್, ಇಲಾಖೆಗಳ ವೆಬ್‌ಸೈಟ್ ಮಾಹಿತಿಗಳನ್ನು ಪಡೆಯುವುದು, ಡೌನ್‌ಲೋಡ್, ಅಪ್‌ಲೋಡ್ ಮಾಡುವುದು, ವಿವಿಧ ಇಲಾಖಾ ತಂತ್ರಂಶಗಳಿಗೆ ಮಾಹಿತಿ ಅಳವಡಿಕೆ ಮತ್ತು ವರದಿಗಳನ್ನು ಪಡೆಯುವುದು ಇತ್ಯಾದಿ ಕಾರ್ಯಗಳನ್ನು ಸದರಿ ಕೇಂದ್ರವನ್ನು ಸಮರ್ಪಕವಾಗಿ ಬಳಸಿಕೊಳ್ಳುವ ಮೂಲಕ ನಿರ್ವಹಿಸುವುದು.

6) ಶಿಕ್ಷಣವಾಹಿನಿ ತಂತ್ರಾಂಶವನ್ನು ಈಗಾಗಲೇ ಎಲ್ಲಾ ಜಿಲ್ಲಾ ಉಪನಿರ್ದೇಶಕರ ಕಛೇರಿಯಲ್ಲಿ ಅನುಷ್ಠಾನಗೊಳಿಸಲಾಗಿದ್ದು, ಪ್ರಸುತ ಬಿ.ಇ.ಓ. ಕಛೇರಿಯಲ್ಲಿ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಕಿಯಾನಿಕ್ಸ್ ವತಿಯಿಂದ 04–10–2012ರಿಂದ ಬ್ಲಾಕ್ ಹಂತದಲ್ಲಿ ತರಬೇತಿಯನ್ನು ಹಮ್ಮಿಕೊಂಡಿದ್ದು, ಸದರಿ ತರಬೇತಿಗೆ ಬಿ.ಇ.ಓ. ಕಛೇರಿಯ ಎಲ್ಲಾ ಸಿಬ್ಬಂದಿಗಳು ತರಬೇತಿಯನ್ನು ಪಡೆಯುವ ಮೂಲಕ ಶಿಕ್ಷಣವಾಹಿನಿ ತಂತ್ರಾಂಶವನ್ನು ನಿರ್ವಹಿಸಲು ಜಿಲ್ಲಾ ಇ–ಆಡಳಿತ ತಂಡವು ಜವಾಬ್ದಾರಿಯನ್ನು ನಿರ್ವಹಿಸುವುದು.

7) ಹೆಚ್.ಆರ್.ಎಂ.ಎಸ್. ತಂತ್ರಾಂಶದಲ್ಲಿ ಹಾಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ಸೇವಾವಿವರಗಳನ್ನು ಪೂರ್ಣವಾಗಿ ತಂತ್ರಾಂಶದಲ್ಲಿ ಅಳವಡಿಸಿರುವುದಿಲ್ಲ ಸಿ.ಆ.ಸಿ.ಇ. ಇಲಾಖೆಯಿಂದ ಆಗಮಿಸಿದ ಶ್ರೀ ವರಪ್ರಸಾದ್ ರೆಡ್ಡಿಯವರು ಮತ್ತು ಶ್ರೀ ಹೆಚ್.ಎಸ್.ಶಂಕರ್ ರವರು ವಿಷಾದವನ್ನು ವ್ಯಕ್ತಪಡಿಸಿದ್ದು, ಸದರಿ ಕಾರ್ಯವನ್ನು ದಿನಾಂಕ:15–10–2012ರೊಳಗೆ ಪೂರ್ಣಗೊಳಿಸಬೇಕೆಂದರು ಅಂತಿಮ ಗಡುವು ನೀಡಿದ್ದು, ಪೂರ್ಣಗೊಳಿಸದೇ ಹೋದಲ್ಲಿ ಅಕ್ಟೋಬರ್ ಮಾಹೆಯ ವೇತನವನ್ನು ಸ್ಥಗಿತಗೊಳಿಸುವುದಾಗಿ ಎಚ್ಚರಿಕೆ ನೀಡಿರುತ್ತಾರೆ. ಈ ನಿಟ್ಟಿನಲ್ಲಿ ಸಂಬಂಧಿಸಿದ ಜಿಲ್ಲಾ ಇ–ಆಡಳಿತ ತಂಡದ ಮೇಲುಸ್ತುವಾರಿಯಲ್ಲಿ ಎಲ್ಲಾ ಡಿ.ಡಿ.ಓ.(ಕ್ಷೇತ್ರ ಶಿಕ್ಷಣಾಧಿಕಾರಿಗಳು, ಪ್ರೌಢ ಶಾಲಾ ಮುಖ್ಯ ಶಿಕ್ಷಕರು) ಗಳನ್ನು ಸಂಪರ್ಕಿಸಿ ಸಂಬಂಧಿಸಿದ ಡಿ.ಡಿ.ಓ.ಗಳ ಮುಂದಾಳತ್ವದಲ್ಲಿ ಡೇಟಾ ಎಂಟ್ರಿ

ಕಾರ್ಯದಲ್ಲಿ ಯಾವುದೇ ಲೋಪವಿಲ್ಲದಂತೆ ಎಚ್ಚರಿಕೆ ವಹಿಸಿ ಸದರಿ ಕಾರ್ಯವನ್ನು ಸಮರೋಪಾದಿಯಲ್ಲಿ ಪೂರ್ಣಗೊಳಿಸುವುದು.

8) ಜಿಲ್ಲಾ ಮತ್ತು ತಾಲ್ಲೂಕುಗಳಲ್ಲಿ ರಚಿತವಾಗಿರುವ ಇ-ಆಡಳಿತ ತಂಡವು ಪ್ರತೀ ಕಛೇರಿಯಲ್ಲಿ ಅಳವಡಿಸಲಾಗಿರುವ ಗಣಕ ಯಂತ್ರಗಳು, ಪ್ರಿಂಟರ್‌ಗಳು, ಸ್ಕ್ಯಾನರ್‌ಗಳು, ಯು.ಪಿ.ಎಸ್. ಸೌಲಭ್ಯ, ಇಂಟರ್‌ನೆಟ್(ಬ್ರಾಡ್‌ಬ್ಯಾಂಡ್), ಕೆ.ಸ್ವಾನ್ ಸಂಪರ್ಕ ವ್ಯವಸ್ಥೆ ಇತ್ಯಾದಿ ವ್ಯವಸ್ಥೆಗಳನ್ನು ವಾರಂಟಿ ಅವಧಿಯಲ್ಲಿ ಸಂಬಂಧಿಸಿದ ಸಂಸ್ಥೆಗಳ ಮೂಲಕ ಹಾಗೂ ವಾರಂಟಿ ಅವಧಿ ನಂತರ ಎ.ಎಂ.ಸಿ. ನೀಡುವ ಮೂಲಕ ನಿರ್ವಹಿಸುವುದು. ಹಾಗೂ ಆವಶ್ಯಕತೆಗಳಿಗನುಗುಣವಾಗಿ ಅಗತ್ಯ ಉಪಕರಣಗಳ ಖರೀದಿ ಇತ್ಯಾದಿಗಳನ್ನು ರಾಜ್ಯ ಇ-ಆಡಳಿತ ತಂಡದೊಂದಿಗೆ ಸಮನ್ವಯದೊಂದಿಗೆ ಕಾರ್ಯ ನಿರ್ವಹಿಸುವುದು.

9) ಆರ್.ಟಿ.ಇ. ಗೆ ಸಂಬಂಧಿಸಿದಂತೆ ನಮೂನೆ-5ರಲ್ಲಿ ಖಾಸಗಿ/ಅನುದಾನಿತ ಶಾಲೆಗಳಲ್ಲಿರುವ ಮಕ್ಕಳ ವಿವರಗಳನ್ನು ಪೂರ್ಣಗೊಳಿಸುವುದು ಹಾಗೂ 2012ರ ಅಕ್ಟೋಬರ್ 31ರೊಳಗೆ ಬಿ.ಇ.ಓ. ಕಛೇರಿ ವ್ಯಾಪ್ತಿಯಲ್ಲಿನ ಈಗಾಗಲೇ ಅಸ್ತಿತ್ವದಲ್ಲಿನ ಶಾಲೆಗಳು ಇಲಾಖಾ ವೆಬ್‌ಸೈಟ್‌ನಲ್ಲಿ ಆನ್‌ಲೈನ್ ಮೂಲಕ ಆರ್.ಟಿ.ಇ. ಕಾಯ್ದೆಯಡಿ ನೊಂದಣಿ ಪಡೆದುಕೊಳ್ಳಲು ಕ್ರಮ ವಹಿಸುವುದು. ಈ ಬಗ್ಗೆ ಬಿ.ಇ.ಓ. ರವರು ವ್ಯಾಪಕ ಪ್ರಚಾರ ನೀಡಿ ಎಲ್ಲಾ ಶಾಲೆಗಳು ನೊಂದಾಯಿಸಿಕೊಳ್ಳುವ ನಿಟ್ಟಿನಲ್ಲಿ ಜಿಲ್ಲಾ ನೋಡಲ್ ಅಧಿಕಾರಿಗಳು ನಿಗಾ ವಹಿಸುವುದು.

ಆಡಳಿತದಲ್ಲಿ ಪಾರದರ್ಶಕತೆ, ಉತ್ತರದಾಯಿತ್ವ ಹಾಗೂ ತ್ವರಿತಗತಿಯಲ್ಲಿ ಸೇವೆಗಳನ್ನು ಸಾರ್ವಜನಿಕರಿಗೆ ಹಾಗೂ ಇಲಾಖಾ ಸಿಬ್ಬಂದಿ ವರ್ಗದವರಿಗೆ ತಲುಪಿಸುವ ಸಲುವಾಗಿ ಎಲ್ಲಾ ಇ-ಆಡಳಿತ ಕಾರ್ಯಕ್ರಮಗಳನ್ನು ಅನುಷ್ಟಾನಗೊಳಿಸುವ ನಿಟ್ಟಿನಲ್ಲಿ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳ ಜವಾಬ್ದಾರಿಯಾಗಿರುತ್ತದೆ. ಮೇಲಿನಂತೆ ಇ-ಆಡಳಿತ ತಂಡವನ್ನು ರಚಿಸಿ ಬಲಪಡಿಸುವುದು ಆಯಾ ಜಿಲ್ಲಾ ಉಪನಿರ್ದೇಶಕರ ಜವಾಬ್ದಾರಿಯಾಗಿದ್ದು, ಈ ಮೇಲಿನ ಅಂಶಗಳನ್ನು ಯಥಾವತ್ತಾಗಿ ಅನುಷ್ಟಾನಗೊಳಿಸಿ ವರದಿಯನ್ನು ಕೂಡಲೇ ಈ ಕಛೇರಿಗೆ ಸಲ್ಲಿಸುವುದು.

(ವಿ.ಜಿ.ದಿವಾಕರ್)
ಅಪರ ಆಯುಕ್ತರು(ಆಡಳಿತ) ಹಾಗೂ
ನೋಡಲ್ ಅಧಿಕಾರಿಗಳು, ಇ-ಆಡಳಿತ ಘಟಕ.

**ಗೌರವ ಪೂರ್ವಕವಾಗಿ ಸಲ್ಲಿಸಿದೆ:**

1) ಪ್ರಧಾನ ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ, ಬಹುಮಹಡಿಗಳ ಕಟ್ಟಡ,
2) ಸರ್ಕಾರದ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಬಹುಮಹಡಿಗಳ ಕಟ್ಟಡ, ಬೆಂಗಳೂರು,
3) ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು
4) ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ,
5) ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ವಿಭಾಗ ರವರಿಗೆ ಸೂಕ್ತ ಕ್ರಮಕ್ಕಾಗಿ,
6) ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ ವಿಭಾಗ ರವರಿಗೆ ಸೂಕ್ತ ಕ್ರಮಕ್ಕಾಗಿ

**ಗೆ,**

1) ಸಂಬಂಧಿಸಿದ ಎಲ್ಲಾ ಅಧಿಕಾರಿಗಳಿಗೆ,
2) ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು(ಆಡಳಿತ)/(ಅಭಿವೃದ್ಧಿ)
3) ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು/ ಕ್ಷೇತ್ರ ಸಂಪನ್ಮೂಲ ಅಧಿಕಾರಿಗಳು

| ANNEXURE -1 | | | |
|---|---|---|---|
| SAKALA NODAL OFFICERS OF BANGALORE - MYSORE DIVISION | | | |
| **List of Nodal officers who attended E- janaspanda S/W workshop held on 28/9/2012** | | | |
| **slno** | **Name of District** | **Officer Attended** | **Designation** |
| 1 | Bangalore North | M V KUMARI | EDUCATIONAL OFFICER |
| 2 | Bangalore South | JALAJAKSHI | EDUCATIONAL OFFICER |
| 3 | Bangalore Rural | NAGARATNA K K | EDUCATIONAL OFFICER |
| 4 | Chamarajanagara | MANJUNATH S N | EDUCATIONAL OFFICER |
| 5 | Chikkaballapur | SYEEDA BEGUM NAVEEN | EDUCATIONAL OFFICER |
| 6 | Chikkamangalore | RAJAPPA | EDUCATIONAL OFFICER |
| 7 | Chitradurga | PRASAD SKB | EDUCATIONAL OFFICER |
| 8 | Dakshina kannada | SADANANDA PUNJA | EDUCATIONAL OFFICER |
| 9 | Davanagere | KRISHA MURTHY D R | EDUCATIONAL OFFICER |
| 10 | Hassan | BHANUMATHI T V | SUJECT INSPECTOR |
| 11 | Kolar | JAYARAMAREDDY K M | EDUCATIONAL OFFICER |
| 12 | Kodagu | SURESHA K V | EDUCATIONAL OFFICER |
| 13 | Madhugiri | VEDHAMURTHY C | SUJECT INSPECTOR |
| 14 | Mandya | RAJAMANI S | SUJECT INSPECTOR |
| 15 | Mysore | SUKKEGOWDA D M | EDUCATIONAL OFFICER |
| 16 | Ramanagara | REKHA K | SUJECT INSPECTOR |
| 17 | Shimoga | SHANKARAPPA T | EDUCATIONAL OFFICER |
| 18 | Tumkur | NANJAIAH C | EDUCATIONAL OFFICER |
| 19 | Udupi | ASHOK KAMATH | EDUCATIONAL OFFICER |
| **SAKALA NODAL OFFICERS OF DHARWAD DIVISION** | | | |
| 20 | BAGALKOTE | ASHOK B BHAJANTRI | EDUCATIONAL OFFICER |
| 21 | BELGAUM | MILLANATTI | EDUCATIONAL OFFICER |
| 22 | BIJAPUR | SINNUR N S | SUJECT INSPECTOR |
| 23 | CHIKKODI | S S CHOUDHARI | EDUCATIONAL OFFICER |
| 24 | DHARWAD | UMESH S SHIRAHATTIMATH | EDUCATIONAL OFFICER |
| 25 | GADAG | MYAGERI C V | EDUCATIONAL OFFICER |
| 26 | HAVERI | NEELAKANTAPPA K M | EDUCATIONAL OFFICER |
| 27 | UTTARA KANNADA | NEELAKANTH LAXMAN MESTHA | EDUCATIONAL OFFICER |
| 28 | SIRSI | NAIK D R | EDUCATIONAL OFFICER |
| **SAKALA NODAL OFFICERS OF GULBARGA DIVISION** | | | |
| 29 | BIDAR | HANUMANTHAPPA K G | EDUCATIONAL OFFICER |
| 30 | BELLARY | ANTHONY A S | EDUCATIONAL OFFICER |
| 31 | GULBARGA | SHIVARACHAPPA VALI | EDUCATIONAL OFFICER |
| 32 | KOPPAL | PATTAR R G | SUJECT INSPECTOR |
| 33 | RAICHUR | CHANDRASHEKAR | EDUCATIONAL OFFICER |
| 34 | YADGIR | VENKOBA | EDUCATIONAL OFFICER |